B.L.D.E. ASSOCIATION'S
S. B. ARTS AND K. C. P. SCIENCE P.U. COLLEGE,
VIJAYAPUR – 586103.
ACCREDITED AT THE "A" LEVEL BY NAAC
Phone: (08352) – 261208, (08352) 262770 Extension. 2247
Fax: 08352 – 261766 E-mail: sbkcppu@gmail.com

Centenary Year 2010

# 2018-19

## ವಿಜಯ ಕರ್ನಾಟಕ ಪತ್ರಿಕೆ ಪ್ರಾಯೋಗಿಕ ಭೇಟಿ

ವಿಷಯ

# ವರದಿಗಾರಿಕೆ ಛಲಗಾರಿಕೆ

ಸುದ್ದಿ-ಸಂಗ್ರಹ-ಮುದ್ರಣ



**ಮಾರ್ಗದರ್ಶಕರು**

ಶೃತಿ ಚಿನಗುಂಡಿ
ಮುಖ್ಯಸ್ಥರು
ಸಮೂಹ ಸಂವಹನ ಮತ್ತು
ಪತ್ರಿಕೋದ್ಯಮ ವಿಭಾಗ

**ವರದಿ ಸಿದ್ಧಪಡಿಸಿದ ವಿದ್ಯಾರ್ಥಿಗಳು**




ಶುಭಾ ಹತ್ತಳ್ಳಿ



ಪೂಜಾ ಬೇವನೂರು



ಅನುಸೂಯಾ ಕೊಣ್ಣೂರು



Scanned with CamScanner

**B.L.D.E.A's**

**S.B Arts and K.C.P Science Vijayapur**

**Department of Journalism and Mass Communication**

**Project Report 2018-19**

**Subject: Creative Reporting- News Collecting and Printing**

Journalism and Mass Communication Department Students, Shubha Hattalli, Pooja Bevanoor and Ansooya Konnur were Visit the Vijyakarnataka Newspaper Office. Students were learned Creative Reporting and how reporters were collect the news Like Local news, National News and International News. Students known about the how to use the camera and paste the newspaper. They knew about techniques of Photography.

After that Students were impressed by Printing. Print publications are better able to increase reader's loyalty because they are credible. Many people subscribe to magazines and newspapers because they understand and believe that the information provided to them is credible and accurate.

IQAC, Co-ordinator
S.B.Arts & K.C.P.Science College
Vijayapur.

Shanti Chingundi
Head of Department
Journalism & Mass Communication
S.B.Arts & K.C.P Science College,
Vijayapur

Principal,
S.B. Arts and KCP Science College
VIJAYAPUR

Scanned with CamScanner

B.L.D.E.ASSOCIATION'S
S. B. ARTS AND K. C. P. SCIENCE COLLEGE,
SHRI B. M. PATIL ROAD (Solapur Road), VIJAYAPUR
ACCREDITED at 'A' Grade in 3rd Cycle by NAAC
Phone: (08352) – 261766, (08352) 262770 Extn. 2223, 2224
Fax: 08352 – 261766 E-mail: bldeasbkcp@gmail.com Web: www.bldeasbkcp.org

REF./ ಕ್ರಮಾಂಕ :

Date /ದಿನಾಂಕ: 15-2-2018

ಸ್ಥಾನಿಕ ಸಂಪಾದಕರು

ವಿಜಯ ಕರ್ನಾಟಕ

ವಿಜಯಪುರ.

ಮಾನ್ಯರೇ,

ವಿಷಯ: ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಅಧ್ಯಯನಕ್ಕಾಗಿ ನಿಮ್ಮ ಕಚೇರಿಗೆ ಭೇಟಿ ನೀಡುವ ಅನುಮತಿ ಕೋರಿ.

VIJAY KARNATAKA
CTS NO. 113/3, WARD NO. 4
PREMASHRI TOWERS, 2nd FLO
M.G. ROAD, OPP. BSNL OFFI
VIJAYPURA - 586101

ನಮ್ಮ ಮಹಾವಿದ್ಯಾಲಯದ ಬಿಎ ಪತ್ರಿಕೋದ್ಯಮ ಪದವಿ ತರಗತಿಯಲ್ಲಿ ಅಭ್ಯಸಿಸುತ್ತಿರುವ ವಿದ್ಯಾರ್ಥಿಗಳಿಗೆ ಪಠ್ಯದ ಜತೆಗೆ ಪ್ರಾಯೋಗಿಕ ಅನುಭವದ ಅಗತ್ಯವಿದೆ. ಹೀಗಾಗಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳು ನಿಮ್ಮ ಮಾಧ್ಯಮ ಕಚೇರಿಗೆ ಭೇಟಿ ನೀಡಲು ಉತ್ಸುಕರಾಗಿದ್ದಾರೆ. ದಯವಿಟ್ಟು ಇದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಧನ್ಯವಾದಗಳೊಂದಿಗೆ

ತಮ್ಮ ವಿಶ್ವಾಸಿ

S.M. Chinagundi

ಶೃತಿ ಚಿನಗುಂಡಿ

ಡಾ.ಕೆ.ಜಿ.ಪೂಜಾರಿ

ಪ್ರಾಧ್ಯಾಪಕರು, ಪತ್ರಿಕೋದ್ಯಮ ವಿಭಾಗ

ಪ್ರಾಚಾರ್ಯರು

Head of Department
Journalism & Mass Communication
S.B.Arts & K.C.P Science College
Vijayapur

Principal
S.B.Arts and K.C.P. Science College
Vijayapur.

IQAC Co-ordinator
S.B.Arts & K.C.P.Science College,
Vijayapur.

IQAC, Co-ordinator
S.B.Arts & K.C.P.Science College,
Vijayapur.

Scanned with CamScanner

# ಮೊದಲ ಮಾತು

ಪತ್ರಿಕೋದ್ಯಮ ಸಾಗರ. ಮೊಗೆದಷ್ಟು ತೆರೆದುಕೊಳ್ಳುವ ವಿಶಾಲ ಜಗತ್ತು. ಪ್ರಜಾ ಭುತ್ವದ ನಾಲ್ಕನೇ ಅಂಗ. ಉತ್ತಮ ಸಮಾಜಕ್ಕಾಗಿ ಉಪಯುಕ್ತ ಮಾಹಿತಿ ನೀಡುವ ಸಾ ನ, ಮಾರ್ಗ. ಅಕ್ಷರದಲ್ಲೇ ಹೊಸ ಲೋಕ ಸೃಷ್ಟಿಸುವ, ಪರಿಚಯಿಸುವ ಅಮೋಘ ವಿಸ್ಮಯ.

ಸಮ ಸಮಾಜಕ್ಕೆ ದೃಶ್ಯ, ಮುದ್ರಣ, ಬಾನುಲಿ, ಅಂತರ್ಜಾಲ ತಮ್ಮದೇಯಾದ ಶಿಷ್ಟ ಕೊಡುಗೆ ನೀಡುತ್ತಿವೆ. ಮಂಗಳೂರು ಸಮಾಚಾರದಿಂದ ಹಿಡಿದು ಇಂದಿನ ನ ರೂಪದ ಪತ್ರಿಕೆಗಳವರೆಗೂ ತನ್ನದೇಯಾದ ವೈಶಿಷ್ಟ್ಯವಿದೆ. ತಂತ್ರಜ್ಞಾನ ಬೆಳೆದಂತೆಲ್ಲ ಪತ್ರಿ ಕೋದ್ಯಮವೂ ಮಗ್ಗಲು ಬದಲಿದೆ. ಉದ್ಯಮ ರೂಪ ಪಡೆದಿದೆ ಎಂಬ ಆರೋಪದ ಇದ್ದಿದ್ದ ಾದರೂ ನೇರ, ನಿರ್ಭೀತ, ಸಕಾಲಕ್ಕೆ ಸರ್ಕಾರನ್ನು ಎಚ್ಚರಿಸುವ ಕಾಯಕ ನಡೆದೇ ಇದೆ. ಸುದ್ದಿ ನೀಡುವ ಶೈಲಿಯೂ ಬದಲಾಗಿದೆ. ಸುದ್ದಿ ನೋಡುವ ದೃಷ್ಟಿಕೋನವೂ ಅತ್ತಿತ್ತ ಾಲಿದೆ.

ಇಂಥ ಸಂದಿಗ್ಧ ಹಾಗೂ ಮುಂದುವರಿದ ಸಮಯದಲ್ಲಿ ಪತ್ರಿಕೋದ್ಯಮ ಅಧ್ಯ ುನ ಕೂಡ ಬಹು ದೊಡ್ಡ ಸವಾಲು. ಇತರೆ ವಿಷಯಗಳಂತೆ ಕೇವಲ ಪುಸ್ತಕಗಳಲ್ಲಿನ ಧ್ಯಾ ುಗಳನ್ನು ಓದಿ ಪರೀಕ್ಷೆ ಎದುರಿಸಿದರೆ ಮುಗಿಯಿತು ಎನ್ನುವ ಸದವಕಾಶ ಪತ್ರಿಕೋದ್ಯಮಕ್ಕೆ ಇ . ನಾಲ್ಕು ಗೋಡೆಗಳ ನಡುವೆ ಕುಳಿತು ಓದು, ಪರೀಕ್ಷೆ ಬರೆಯುವುದರ ಜತೆಗೆ ಪ್ರಾಯೋ ಗಿಕ ತರಬೇತಿಯೂ ಅಷ್ಟೇ ಮುಖ್ಯ.

ವೃತ್ತಿಪರ ಪತ್ರಕರ್ತರಿಗೆ ಪತ್ರಿಕೋದ್ಯಮದ ಇತಿಹಾಸದ ಜತೆಗೆ ಸಮಕಾಲಿನ ಬ ಲಾವಣೆ, ಮಾರುಕಟ್ಟೆಯಲ್ಲಿ ಆಗುತ್ತಿರುವ ಏರಿಳಿತ, ಸುದ್ದಿ ಬರವಣಿಗೆಯಲ್ಲಿನ ನವೀನತೆ, ಜಾಹೀರಾತಿನ ಕ್ರಿಯಾಶೀಲತೆ, ಪುಟ ವಿನ್ಯಾಸದ ಹೊಸ ರೂಪತೆ, ಛಾಯಾಚಿತ್ರಗಳ ಕಣ್ಮನ ಸ ೆತ, ಸುದ್ದಿ ಸಂಗ್ರಹದ ಸಮಸ್ಯೆ ಹಾಗೂ ಸವಾಲುಗಳ, ವರದಿಗಾರನ ಪ್ರಶ್ನಾರ್ಥಕ ಗೊಂ ಲಗಳು. ಇವೆಲ್ಲವುಗಳನ್ನು ಮೀರಿ ಮುಂಜಾನೆ ಬಿಸಿ ಕಾಫಿ ಜತೆಗೆ ಮನೆಯ ಟೇಬಲ್ ಮೇಲೆ ಬಂದು ಬೀಳುವ ಬಿಸಿ ಬಿಸಿ ಸುದ್ದಿಗಳ ಹೂರಣ ನೋಡುವುದೇ ಅಚ್ಚರಿ.

ಈ ಎಲ್ಲ ಅಚ್ಚರಿ, ತವಕ, ವಿಸ್ಮಯ, ಹೊಸ ಜಗತ್ತಿನ ಪ್ರಾಯೋಗಿಕ ಅಧ್ಯಯನ ಕ್ಕೆ ನಮ್ಮ ವಿದ್ಯಾರ್ಥಿಗಳು ತೆರಳಿದ್ದು ವಿಜಯ ಕರ್ನಾಟಕ ಪತ್ರಿಕೆಯ ವಿಜಯಪುರ ಕಚೇ ಗೆ. ಅಲ್ಲಿ ಪತ್ರಿಕಾ ಪ್ರಕಟಣೆಯಿಂದ ಹಿಡಿದು ಮುದ್ರಣವಾಗುವವರೆಗೂ ನಡೆಯುವ ಎಲ್ಲ ಪ್ರಕ್ರಿಯೆಗಳನ್ನು ಕಣ್ಣಾರೆ ಕಂಡು ಬೆರಗುಗೊಂಡ ಕ್ಷಣ ಅವಿಸ್ಮರಣೀಯ. ಪುಟ ನ್ಯಾಸ, ಸಂಪಾದಕೀಯ, ವರದಿಗಾರಿಕೆ, ತಲೆಬರಹ, ಅಡಿಬರಹ ಸೇರಿದಂತೆ ಪತ್ರಿಕೋ ್ಯಮದ ವಿವಿಧ ಆಯಾಮುಗಳನ್ನು ಪ್ರಾಯೋಗಿಕವಾಗಿ ಕಲಿತದ್ದು ವಿಶೇಷ. ಅದೆಲ್ಲದಕ್ಕೂ ಅಕ್ಷ ರೂಪ ನೀಡಿದ್ದಾರೆ.

ಶೃತಿ ಚಿನಗುಂಡಿ
ಮುಖ್ಯಸ್ಥರು, ಸಮೂಹ ಸಂವಹನ ವ ತ್ತು ಪತ್ರಿಕೋದ್ಯಮ

Shruti Chingundi
Head of Department
Journalism & Mass Communication
S.B.Arts & K.C.P Science College,
Vijayapur

IQAC, Co-ordinator
S.B.Arts & K.C.P.Science College,
Vijayapur.

Principal,
S.B. Arts and KCP Science College
VIJAYAPUR

Scanned with CamScanner

# ಪಠ್ಯವಿಷಯ

❖ ಸುದ್ದಿ ಮನೆಯ ರೋಚಕ ಕಥೆ

ಸಿಬ್ಬಂದಿ–ಸುದ್ದಿ–ಪತ್ರಿಕೆ–ಪ್ರಸರಣ

❖ ಸುದ್ದಿ ಸುತ್ತಾಡ

ನೇರ–ದಿಟ್ಟ–ನಿರಂತರ


❖ ಸುದ್ದಿಗಳ ಒಗ್ಗರಣೆ ಲೋಕ

Cont---

Scanned with CamScanner

# ಸುದ್ದಿ ಮನೆಯ ರೋಚಕ ಕಥೆ

ಸಿಬ್ಬಂದಿ–ಸುದ್ದಿ–ಪತ್ರಿಕೆ–ಪ್ರಸರಣ



ಅಡಿಬರಹ: ಮಾಧ್ಯಮ ಲೋಕಕ್ಕೆ ಇಣುಕಿದಾಗ ಕಂಡ ಚಿತ್ರ.

ಮಾಧ್ಯಮ ಲೋಕದ ಹುಟ್ಟು, ಬೆಳವಣಿಗೆಗಳ ಜೊತೆಗೆ ಅದನ್ನು ಕಷ್ಟಪಟ್ಟು ಕಟ್ಟಿದ ವ್ಯಕ್ತಿಗಳ ಶ್ರಮ ಕಥೆಗಳು ಅನಾವರಣಗೊಳ್ಳುತ್ತವೆ. ಸುದ್ದಿಯನ್ನು ನೋಡವ, ಓದುವ, ಜನರ ನಾಡಿಮಿಡಿತವನ್ನು ಅರಿಯುವುದು ಎಷ್ಟು

Cont...

ಮುಖ್ಯ ಎಂಬುದು ತಿಳಿಯುತ್ತದೆ. ಜನರ ಆಸಕ್ತಿಗೆ ತಕ್ಕಂತೆ ಸುದ್ದಿಯ ಔತಣಕೂಟವನ್ನು ಏರ್ಪಡಿಸುವ ದೃಗ್, ಶ್ರಾವ್ಯ ಮಾಧ್ಯಮಗಳು ಇಂದು ಸಮಾಜದ ಒಳಿತು ಕೆಡಕುಗಳ ಹೊಣೆ ಹೊತ್ತಿವೆ. ಕಾಲ ಪರಿಸರಕ್ಕೆ, ಆಸಕ್ತಿಗೆ ತಕ್ಕಂತೆ ಸುದ್ದಿಗಳನ್ನು ಬಿತ್ತರಿಸುತ್ತವೆ. ಇವೆಲ್ಲದರ ಹಿಂದಿನ ಶ್ರಮಜೀವನದ ಪರಿಚಯದ ಪೀಠಿಕೆ ಇದಾಗಿದೆ. ಬ್ರಿಟಿಷರ ದಾಸ್ಯದ ಸಂಕೋಲೆಯಲ್ಲಿ ಪತ್ರಿಕೋದ್ಯಮ ಭಾರತದ ಜನಮನದಲ್ಲಿ ನೆಲೆಯೂರಲು ಪ್ರಾರಂಭಿಸಿತು.

ಭಾರತದ ಮೊದಲ ಪತ್ರಿಕೆ ಬೆಂಗಾಲ್ ಗೆಜೆಟ್. ೧೯೨೭ರಲ್ಲಿ ಮೊದಲ ಬಾರಿಗೆ ಭಾರತಕ್ಕೆ ರೇಡಿಯೋ ಪ್ರಸರಣ ಶುರುವಾಯಿತು. ದಾದಾ ಸಾಹೇಬ್ ಪಾಲ್ಕೆ ಇಂಗ್ಲೆಂಡ್‌ಗೆ ಹೋಗಿ ಚಲನಚಿತ್ರ ನಿರ್ಮಾಣ ತಂತ್ರದ ಬಗ್ಗೆ ತರಬೇತಿ ಪಡೆದು ರಾಜಾ ಹರಿಶ್ಚಂದ್ರ ಚಿತ್ರವನ್ನು ತೆರೆಗೆ ತಂದರು. ಹೀಗೆ ಹಿಂದಿನ, ಈಗಿನ, ಮುಂದಿನ ಮಾಧ್ಯಮ ಲೋಕದ ವಿಶಾಲ ನೋಟವನ್ನು ನಾಲ್ಕು ಗೋಡೆಯ ನಡುವಿನ ತರಗತಿಯಲ್ಲಿ ಕಾಣುತ್ತಿದ್ದೆವು. ನಮ್ಮ ಕಲಿಕೆ ತರಗತಿಗಷ್ಟೇ ಸೀಮಿತವಾಗದೆ. ಹೊರಜಗತ್ತಿಗೂ ತೆರೆದುಕೊಂಡಿತು. ನಮ್ಮ ಎಸ್.ಬಿ. ಕಲಾ ಮತ್ತು ಕೆ.ಸಿ.ಪಿ ವಿಜ್ಞಾನ ಮಹಾವಿದ್ಯಾಲಯದ ಸಮೂಹ ಸಂವಹನ & ಪತ್ರಿಕೋದ್ಯಮ ಮತ್ತು ವಿಭಾಗದಲ್ಲಿ ನಾವಿಂದು ಅಧ್ಯಯನ ಮಾಡುತ್ತಿದ್ದೆವೆ.

ಪತ್ರಿಕೋದ್ಯಮವೂ ಯಾವ ರೀತಿ ನಮ್ಮ ಭವಿಷ್ಯವನ್ನು ಕಟ್ಟಿಕೊಡುತ್ತದೆ ಎಂಬ ಬಹು ದೊಡ್ಡ ಪ್ರಶ್ನೆ ಮೊದಲಿಗೆ ಸಾಮಾನ್ಯವಾಗಿ ನಮ್ಮೆಲ್ಲರಲ್ಲಿಯೂ ಇತ್ತು. ಬರುಬರುತ್ತಾ ಅದರ ಆಳ, ಅಗಲದ ವಿಷಯಗಳನ್ನು ಕಲಿಯುತ್ತಾ ಹೊರಟೆವು. ಬರಿ ಪುಸ್ತಕದ ಹುಳುವಾಗದೆ, ಪ್ರಾಯೋಗಿಕವಾಗಿಯು ಸಮಾಜದಲ್ಲಿ ಕಲಿಯಲು ಅವಕಾಶ ಕಲ್ಪಿಸಿ

Cont---

Scanned with CamScanner

ಕೊಟ್ಟಿದ್ದು ನಮ್ಮ ಪತ್ರಿಕೋದ್ಯಮ ವಿಭಾಗದ ಉಪನ್ಯಾಸಕಿಯಾದ ಶೃತಿ ಚಿನಗುಂಡಿ ಅವರು.

ಅದೆಷ್ಟೋ ಆಸಕ್ತಿ ಇಂದ ಬಂದಂತಹ ವಿದ್ಯಾರ್ಥಿಗಳಿದ್ದರೂ, ಪತ್ರಿಕೋದ್ಯಮ ಎಂದರೆ ಏನು ಎಂದು ಯೋಚಿಸಿ ಗಾಬರಿಯಾದ ವಿದ್ಯಾರ್ಥಿಗಳು ಇದ್ದರು. ಇವರೆಲ್ಲರನ್ನು ಒಂದುಗೂಡಿಸಿ ಎಲ್ಲರಿಗೂ ಪತ್ರಿಕೋದ್ಯಮದ ಅವಕಾಶಗಳು, ಪ್ರಯೋಜನಗಳು, ಇದರಲ್ಲಿನ ಹತ್ತು ಹಲವು ವೃತ್ತಿಗಳನ್ನು ತಿಳಿ ಹೇಳಿದ್ದು ನಮ್ಮ ಪ್ರಾಧ್ಯಾಪಕಿಯವರು. ನಂತರ ಹಲವಾರು ಪ್ರಾಯೋಗಿಕ ಚಟುವಟಿಕೆಗಳನ್ನು ಆಸಕ್ತಿಯಿಂದ ನಡೆಸಿ ಅದರಲ್ಲಿ ಪಾಲ್ಗೊಳ್ಳುವಂತೆ ಮಾಡಿದರು.

ಪತ್ರಿಕೋದ್ಯಮದ ಆಳ ಅಗಲ ಸಾಗರದಷ್ಟು ನಾವಿನ್ನು ಅದರ ದಡದಲ್ಲಿಯೇ ನಿಂತು ವೀಕ್ಷಿಸುತ್ತಿದ್ದೆವೆ. ಇದು ಕೇವಲ ಪುಸ್ತಕದ ಬೋಧನಾ ವಿಷಯವಾಗಿರದೆ. ಪ್ರಾಯೋಗಿಕ ಕೆಲಸ, ಅನುಭವದಿಂದಲೇ ವೃತ್ತಿ ಬದುಕಿನ ಅರಿವಾಗುವುದು. ಆದ್ದರಿಂದ ನಮ್ಮ ಕಾಲೇಜಿನ ಪತ್ರಿಕೋದ್ಯಮ ವಿಭಾಗದಿಂದ ಎಲ್ಲ ವಿದ್ಯಾರ್ಥಿಗಳನ್ನು ವಿಜಯಪುರ ನಗರದ ವಿಜಯ-ಕರ್ನಾಟಕ ದಿನಪತ್ರಿಕೆಯ ಕಚೇರಿಗೆ ಕರೆದುಕೊಂಡು ಹೋಗಿದ್ದರು.

ವಿಜಯ-ಕರ್ನಾಟಕ ಪತ್ರಿಕೆಯ ಎಲ್ಲಾ ಸಿಬ್ಬಂದಿ ವರ್ಗದವರು ನಮ್ಮನ್ನು ಆತ್ಮೀಯತೆ ಇಂದಲೇ ಸ್ವಾಗತಿಸಿಕೊಂಡರು. ಕಚೇರಿ ಯಾವ ರೀತಿ ಇರುತ್ತದೆ ? ಅಲ್ಲಿನ ಸಿಬ್ಬಂದಿ ಹೇಗೆ ನಮ್ಮೆಲ್ಲರ ಜೊತೆ ಮಾತನಾಡುತ್ತಾರೆ ? ಅವರಿಗೆ ಏನೆಂದು ಪ್ರಶ್ನೆ ಕೇಳುವುದು? ಎಂಬ ಹಲವಾರು ಕುತೂಹಲದ ಪ್ರಶ್ನೆಗಳು ನಮ್ಮೆಲ್ಲರಲ್ಲಿಯೂ ಇದ್ದವು. ಆದರೆ ನಾವು ಆಫೀಸಿನ ಒಳಗೆ ಹೋಗುತ್ತಿದ್ದಂತೆ ಅವರೆಲ್ಲರೂ ನಮ್ಮೊಂದಿಗೆ ಬೆರೆತ ರೀತಿ ಈ ಪ್ರಶ್ನೆಗಳಿಗೆ

Cont--

ಸ್ಥಳಾವಕಾಶವನ್ನೇ ನೀಡಲಿಲ್ಲ. ಆಫೀಸಿನ ಪ್ರತಿಯೊಂದು ಮಾಹಿತಿಯನ್ನು ನಮಗೆ ಹೇಳುತ್ತಾ ಹೋದರು.

ಒಂದು ದಿನಪತ್ರಿಕೆಯ ಹಿಂದಿನ ಹಲವಾರು ಜನರ ಶ್ರಮದ ಅರಿವು ನಮಗಾಯಿತು. ನಾವು ಮೊದಲಿಗೆ ಭೇಟಿಯಾಗಿದ್ದು ಪತ್ರಕೆಯ ಸಂಪಾದಕರಾದ ಉಮೇಶ್ ಭಟ್ಟ ಅವರನ್ನು ಅವರು ನಮ್ಮೆಲ್ಲರನ್ನು ಪರಿಚಯಿಸಿಕೊಂಡರು. ಹಾಗೂ ತಮ್ಮ ಸಿಬ್ಬಂದಿಯನ್ನು ನಮಗೆ ಪರಿಚಯಿಸಿಕೊಟ್ಟರು. ಒಂದು ಪತ್ರಿಕೆಯನ್ನು ಯಾವ ರೀತಿ ಓದಬೇಕು, ಪತ್ರಿಕೆಗಳ ನಡುವಿನ ವ್ಯತ್ಯಾಸ, ಒಂದು ಪತ್ರಿಕೆ ತಯಾರಿಕೆಯಲ್ಲಿ ಆಗುವಂತಹ ಕಷ್ಟ, ತಗಲುವ ವೆಚ್ಚ, ವರದಿಗಾರರ ಚಾಣಾಕ್ಷ ಕೆಲಸದ ಬಗ್ಗೆ ತಿಳಿಸಿದರು.

ಒಬ್ಬ ಉತ್ತಮ ಪತ್ರಕರ್ತನಾಗಲು ಬೇಕಾಗುವ ಗುಣಗಳನ್ನು ಹೇಳಿಕೊಟ್ಟರು. ನಂತರ ಉಪ ಸಂಪಾದಕರು, ಮುಖ್ಯ ಉಪಸಂಪಾದಕರು, ಜಿಲ್ಲಾ ವರದಿಗಾರರು, ಸ್ಥಾನಿಕ ಸಂಪಾದಕರು, ವರದಿಗಾರರು, ಕ್ಯಾಮರಾ ಮ್ಯಾನ್, ವರದಿಗಾರರ ಗುಣಲಕ್ಷಣಗಳು, ಯಾವ ರೀತಿ ಓದಬೇಕು, ಹೇಗೆ ಈಗಿನಿಂದಲೇ ತಯಾರಿ ನಡೆಸಬೇಕು ಎಂಬುದನ್ನು ತಿಳಿಸಿದರು.

ನನಗೆ ಇಷ್ಟವಾದ ವಿಭಾಗವೆಂದರೆ ವರದಿಗಾರಿಕೆ. ಕಾರಣ ಉಳಿದವರು ಕಚೇರಿಯಲ್ಲಿ ಕೂತು ಕೆಲಸ ಮಾಡುವುದರಿಂದ ಜನರೊಂದಿಗೆ ಬೆರೆಯಲು ಸಾಧ್ಯವಾಗುವುದಿಲ್ಲ. ತಮ್ಮ ಪ್ರತಿಭೆಯನ್ನು ತೋರ್ಪಡಿಸಲಾಗದು. ಸಮಾಜದಲ್ಲಿ ಗುರುತಿಸಿಕೊಳ್ಳಲು ಇದೊಂದು ಒಳ್ಳೆಯ ವೃತ್ತಿ ಎನ್ನುವುದು ನನ್ನ ಅಭಿಪ್ರಾಯ.

Cont..

Scanned with CamScanner

ವಿಜಯಪುರ ಹಾಗೂ ಬಾಗಲಕೋಟೆಯ ಒಟ್ಟು ವಿಜಯ ಕರ್ನಾಟಕ ವರದಿಗಾರರೆಂದರೆ ೨೨ ಜನ ಹಾಗೂ ಒಬ್ಬ ಕ್ಯಾಮರಾ ಮ್ಯಾನ್ ಕೆಲಸ ನಿರ್ವಹಿಸುತ್ತಿದ್ದಾರೆ. ಒಬ್ಬ ವರದಿಗಾರನಾದ ಮೇಲೆ ಆತ ಸಮಾಜದಲ್ಲಿಯೇ ಇದ್ದುಕೊಂಡು ಅಲ್ಲಿನ ವರದಿಗಳನ್ನೆ ಸುದ್ದಿಮಾಡಿ ತಾನು ಗುರುತಿಸಿಕೊಳ್ಳುತ್ತಾನೆ. ಹೀಗಾಗಿ ಈ ವೃತ್ತಿ ನನ್ನ ಮೆಚ್ಚುಗೆಗೆ ಪಾತ್ರವಾಯಿತು.

ಒಂದು ಪತ್ರಿಕೆ ತಯಾರಾಗಲು ಎಷ್ಟು ವಿಭಿನ್ನ ವಿಭಾಗಗಳಲ್ಲಿ ಹತ್ತು ಹಲವಾರು ಜನರ ಪಾತ್ರ ಇರುತ್ತದೆ. ಸುದ್ದಿ ಕೊಡುವವನು ಒಬ್ಬನಾದರೆ ಅದನ್ನು ನೋಡುವವರು ಇನ್ನೊಬ್ಬರು, ಮತ್ತೊಬ್ಬರು ಅದನ್ನು ಸರಿಪಡಿಸಿ ಗ್ರಾಂಥಿಕ ರೂಪ ಕೊಟ್ಟರೆ. ಇನ್ನೊಬ್ಬರು ಅದನ್ನು ಸ್ಥಳಾವಕಾಶದ ಮೇಲೆ ದೊಡ್ಡದು, ಚಿಕ್ಕದಾಗಿ ಪರಿವರ್ತಿಸುತ್ತಾರೆ. ಇವರೆಲ್ಲರಿಗೂ ಸುದ್ದಿಗೆ ತಕ್ಕಂತೆ ಛಾಯಾಚಿತ್ರ ನೀಡುವವರು.

ಒಬ್ಬರು ಅದನ್ನು ಕಂಪ್ಯೂಟರನಲ್ಲಿಯೇ ಬೆಂಗಳೂರಿನಂತಹ ದೊಡ್ಡ ದೊಡ್ಡ ನಗರದ ಆಫೀಸಿಗೆ ಕಳುಹಿಸಿ ಪತ್ರಿಕೆಯಲ್ಲಿ ಹಾಕಲು ಯೋಗ್ಯವಾಗುವಂತೆ ಮಾಡುವವರು ಇನ್ನೊಬ್ಬರು. ಇಷ್ಟೇಲ್ಲ ಒಂದು ಪತ್ರಿಕೆಯ ಒಂದು ಸುದ್ದಿ ತಯಾರಾಗಲು ಬೇಕಾಗುವಂತಹದ್ದು.

ಛಾಯಾಚಿತ್ರದಲ್ಲಿ ಬಳಸುವ ತಂತ್ರಾಂಶಗಳು ಹಾಗೂ ಟ್ರಾನ್ಸ್‌ಫಾರ್ಮ್‌ಗಳ ಬಗ್ಗೆ ನಮಗೆ ಗೊತ್ತಿರಲಿಲ್ಲ. ಟ್ರಾನ್ಸ್‌ಫಾರ್ಮ್‌ಗಳೆಂದರೆ ವರದಿಗಾರ/ಸುದ್ದಿ ಮಾಹಿತಿ ನೀಡುವ ವ್ಯಕ್ತಿ ಯಾವುದೇ ವಿಧದ ಕಂಪ್ಯೂಟರ್ ಭಾಷೆಯಲ್ಲಿ ಟೈಪ್ ಮಾಡಿ ಕಳುಹಿಸಿದ್ದರೆ ಅದನ್ನು ಪತ್ರಿಕೆಯಲ್ಲಿ ಬಳಸುವ ಭಾಷೆ/ ನುಡಿ ತಂತ್ರಾಂಶಕ್ಕೆ ಪರಿವರ್ತಿಸಿಕೊಳ್ಳಲಾಗುತ್ತದೆ. ನಂತರ ಅದನ್ನು ಎಡಿಟಿಂಗ್ ವಿಭಾಗಕ್ಕೆ

Cont--

Scanned with CamScanner

ಕಳುಹಿಸಿಕೊಡಲಾಗುತ್ತದೆ ಎಂಬ ಮಾಹಿತಿಯನ್ನು ನಾನು ಇಲ್ಲಿ ತಿಳಿದುಕೊಂಡೆವು.

ಆಫೀಸಿಗೆ ಹೋದ ಕೆಲ ದಿನಗಳಲ್ಲಿಯೇ ನಮ್ಮ ಹಲವಾರು ಬರಹಗಳು ಪ್ರಕಟವಾದವು. ಹಲವಾರು ಕಡೆ ರಿಪೋರ್ಟಿಂಗ್ ಕೂಡಾ ಹೋಗಿ ಸುದ್ದಿ ಮಾಡಿದೆವು. ಕಾರ್ಯಕ್ರಮ ಸುದ್ದಿ, ಸಮಸ್ಯೆಗಳ ಸುದ್ದಿ, ಅಪಘಾತ ಸುದ್ದಿಯನ್ನು ಮಾಡಿ ಅವುಗಳ ಬರವಣಿಗೆ ಶೈಲಿಯನ್ನು ಕಲಿತೆವು. ನಮ್ಮ ಹೆಸರು ಪತ್ರಿಕೆಯ ಸಣ್ಣ ದೊಡ್ಡ ಸುದ್ದಿಯ ಅಡಿಬರಹದಲ್ಲಿ ಕಂಡಾಗ ತುಂಬಾ ಖುಷಿ, ಹೆಮ್ಮೆ ಪಟ್ಟೆವು ಇದು ನಮ್ಮ ಜೀವನದಲ್ಲಿಯೇ ಅಳಿಸಲಾಗದಂತಹ ಕೆಲವು ಅಮೂಲ್ಯ ಕ್ಷಣಗಳಲ್ಲಿ ಒಂದಾಯಿತು.

ಕ್ಯಾಮರಾದ ಬಳಕೆ, ಫೋಟೋ ತೆಗೆಯುವ ವಿಧಾನಗಳು, ಅವುಗಳನ್ನು ಪತ್ರಿಕೆಯಲ್ಲಿ ಅಳವಡಿಸುವ ರೀತಿ ಹಾಗೂ ಪೇಜ್ ಡಿಸೈನ್‌ಗಳ ಬಗ್ಗೆಯೂ ಕಲಿತೆವು. ನಮ್ಮ ಭವಿಷ್ಯದ ವೃತ್ತಿ ಜೀವನಕ್ಕೆ ಅನುಕೂಲವಾಗುವಂತೆ, ನಮ್ಮ ಯಶಸ್ಸಿನ ಮೊದಲ ಮೆಟ್ಟಿಲು ಈ ನಮ್ಮ ವಿಜಯ ಕರ್ನಾಟಕ ದಿನಪತ್ರಿಕೆಯ ಭೇಟಿಯಾಗಿತ್ತು.

ಹಲವಾರು ವಿಷಯಗಳನ್ನು ಚರ್ಚಿಸಿದೆವು. ಸಾಧಕರುಗಳನ್ನು ಸಂದರ್ಶಿಸಿದೆವು. ಕರ್ಮಯೋಗಿಗಳು, ಶ್ರೇಷ್ಠ ವರದಿಗಾರರು, ಹೊಸ ಹೊಸ ಪ್ರದೇಶಗಳು, ಹೆಚ್ಚೆಚ್ಚು ಜನರನ್ನು ಭೇಟಿಯಾದೆವು. ಸಮಾಜದಲ್ಲಿ ಎಲ್ಲೋ ಒಂದು ಕಡೆಯಿಂದ ನಾವು ಬೆಳೆಯುತ್ತಿದ್ದೇವೆ, ನಾವು ಗುರುತಿಸಿಕೊಳ್ಳುತ್ತಿದ್ದೇವೆ ಎಂಬ ಭಾವನೆ ಮೂಡಿತು. ಇದು ನಮ್ಮ ಜೀವನದ ಮುಂದಿನ ದಿನಗಳ ಭದ್ರ ಬುನಾದಿಯಾಯಿತು ಎಂದರೆ ತಪ್ಪಾಗಲಾರದು. ನಮ್ಮ ಕಲಿಕೆಗೆ, ಭವಿಷ್ಯದ ಸಾಧಕ ಆಸಕ್ತಿಗೆ ಹಾಗೂ ವೃತ್ತಿ ಹಂಬಲಕ್ಕೆ ಸಹಕರಿಸಿ ನಮಗೆ ಮಾಹಿತಿ

Cont--

Scanned with CamScanner

ನೀಡಿ, ಪ್ರೋತ್ಸಾಹಿಸಿದ ಪತ್ರಿಕೆಯ ಸಿಬ್ಬಂದಿ ವರ್ಗಕ್ಕೆ ನಾನು ಚಿರಋಣಿ. ಹಾಗೂ ಕಲಿಕಾ ಆಸಕ್ತಿಗೆ ಪ್ರೋತ್ಸಾಹಿಸಿದ ನಮ್ಮ ಕಾಲೇಜಿನ ಉಪನ್ಯಾಸಕರಿಗೂ ಹಾಗೂ ಪ್ರಾಚಾರ್ಯರಿಗೂ ಧನ್ಯವಾದಗಳು.

Shattalli
ಶುಭಾ ಮಲ್ಲೇಶ್ ಹತ್ತಳ್ಳಿ
ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ
ಬಿ.ಎ. ಮೂರನೇ ಸೆಮಿಸ್ಟರ

Shruti Chingundi
Head of Department
Journalism & Mass Communication
S.B.Arts & K.C.P Science College,
Vijayapur

IQAC, Co-ordinator
S.B.Arts & K.C.P.Science College,
Vijayapur.

Principal,
S.B. Arts and KCP Science Colleg
VIJAYAPUR

Scanned with CamScanner

# ಸುದ್ದಿ ಸುತ್ತಾಡ

## ನೇರ–ದಿಟ್ಟ–ನಿರಂತರ



ಅಡಿಬರಹ: ಸುದ್ದಿಗಳನ್ನು ಸಿದ್ಧಪಡಿಸುವ ಆಯಾಮಗಳನ್ನು ತಿಳಿಸುತ್ತಿರುವುದು.

ಪ್ರಾಚಾರ್ಯರ ಅನುಮತಿ ಮೇರೆಗೆ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ಪ್ರಾಧ್ಯಾಪಕರು ಪ್ರಾಯೋಗಿಕ ಅಧ್ಯಯನಕ್ಕಾಗಿ ವಿಜಯಪುರ ಜಿಲ್ಲೆಯ ವಿಜಯ ಕರ್ನಾಟಕ ಪತ್ರಿಕೆಗೆ ಭೇಟಿ ನಿಡಿದೆವು.

ಆಫೀಸಿನ ಒಳಗಡೆ ಹೋಗುತ್ತಿದ್ದಂತೆ ಎಲ್ಲ ಸಿಬ್ಬಂದಿ ವರ್ಗದವರನ್ನು ಸ್ಥಾನಿಕ ಸಂಪಾದಕರು ಪರಿಚಯಿಸಿದರು. ನಾವು ಈ ಮೊದಲೂ ಬೋಧನಾ ಕೋಣೆಯಲ್ಲಿ ನಮ್ಮ ಶಿಕ್ಷಕಿ ಹೇಳಿದ ಎಲ್ಲ

Cont--

ವಿಷಯವನ್ನು ತಿಳಿದಿದ್ದೆವು. ಆದರೆ ಪ್ರಾಯೊಗ ಅಧಯನದ ಕೊರತೆ ನಮ್ಮನ್ನು ಕಾಡಿತ್ತು ಅದು ಕೂಡ ಇಲ್ಲಿ ನೇರವೇರಿತು. ಪತ್ರಿಕೋದ್ಯಮ ವಿಷಯವನ್ನು ನಾಲ್ಕು ಗೋಡೆ ಮಧ್ಯ ಕಲಿಯುವುದಕ್ಕಿಂತ ತಿರುಗಾಡಿ ಕಲಿಯುವುದು ಪ್ರಮುಖ.

ಪತ್ರಿಕಾ ಕಛೇರಿಯ ಸುದ್ದಿ ಮನೆಯಲ್ಲಿ ವರದಿಗಾರಿಕೆ ವಿಭಾಗ, ಸಂಪಾದಕೀಯ ವಿಭಾಗ, ಜಾಹೀರಾತು ವಿಭಾಗ, ಡಿಸೈನಿಂಗ್ ಹೀಗೆ ಎಲ್ಲ ವಿಭಾಗಗಳಿ ಇದ್ದವು. ಒಂದು ಪತ್ರಿಕರ ತಯಾರಿಕೆ ಸುಲಭ ಎಂದುಕೊಂಡ ನಮಗೆ ವಾಸ್ತವದ ಪತ್ರಿಕೋದ್ಯಮ ಅರಿವಾಯಿತು. ಒಂದು ಸುದ್ದಿಯನ್ನು ಸರಿಪಡಿಸಲು ಅಥವಾ ಅಚ್ಚಿಗೆ ಕಳುಹಿಸುವ ಮುನ್ನ ಮೂರು ಜನರು ಒಂದು ಸುದ್ದಿಯನ್ನು ಪರಿಶೀಲಿಸುತ್ತಾರೆ.

ಮೊದಲು ವರದಿಗಾರ ನಂತರ ಉಪ ಸಂಪಾದಕ ಆ ನಂತರ ಸ್ಥಾನಿಕ ಸಂಪಾದಕರು ಕಣ್ಣಾಡಿಸಿ ಪೈನಲ್ ಮಾಡುತ್ತಾರೆ. ಅದೇ ರೀತಿ ವರದಿಗಾರಿಗೆ ವಿಭಾಗಕ್ಕೆ ಬಂದರೆ ಆ ವಿಭಾಗದಲ್ಲಿ ನಾಲ್ಕು ಜನ ಇರುತ್ತಾರೆ. ಅದರಲ್ಲಿ ಮುಖ್ಯ ವರಿಗಾರರೊಬ್ಬರು ಅವರು ಹೇಳಿದಂತೆ ಮಿಕ್ಕವರು ಕೇಳುತ್ತಾರೆ.

ಪತ್ರಿಕಾಗೋಷ್ಠಿಗೂ ತೆರಳಲು ಅವರ ಅನುಮತಿ ಮೇರೆಗೆ ಹೋಗಬೇಕಾಗುತ್ತದೆ. ಹಾಗೆ ಮುಖ್ಯ ವರದಿಗಾರ ಇನ್ನುಳಿದ ವರದಿಗಾರರಿಗೆ ಅಸೈನಮೆಂಟ್ ಗಳನ್ನು ಸಹ ಹಾಕುತ್ತಾರೆ. ದಿನವಿಡಿ ಸುದ್ದಿಗಳ ಜೊತೆ-ಜೊತೆಗೆ ಒಗ್ಗರಣೆ ಬರಿತ ಸುದ್ದಿಗಳು ಲೇಖನಗಳು ಜನರ ಮನಸ್ಸನ್ನು ಗೆಲ್ಲವಂತಹ ಸಾಹಸವನ್ನು ಸಹ ಮಾಡಬೇಕಾಗುತ್ತದೆ.

ಒಂದು ವರದಿಯನ್ನು ಮಾಡುವುದೆಂದರೆ ಸುಲಭದ ಕೆಲಸವಲ್ಲ ಸುದ್ದಿಯ ಮಗ್ಗಲುಗಳನ್ನೆಲ್ಲ ಪರಿಶೀಲಿಸಿ ಒಂದು

Cont--

Scanned with CamScanner

ಹಂತಕ್ಕೆ ತರುವಷ್ಟರಲ್ಲಿ ವರದಿಗಾರನ ಸುದ್ದಿ ಮುಗಿದಂತಲ್ಲ ಅನ್ನು ಉಪಸಂಪಾದರಿಗೆ ಒಪ್ಪಿಸಬೇಕಾಗುತ್ತದೆ. ಆಮೇಲೆ ಅದು ಪೈನಲ್ ಆಗುವುದು. ಹೀಗೆ ಒಂದು ವರದಿಯನ್ನು ಸಿದ್ಧ ಪಡಿಸಲು ವರದಿಗಾರ ಈ ಕೆಲಸಗಳನ್ನು ಮಾಡಬೇಕಾಗುದು.

ನಾನು ಪಿಯುಸಿ ನಂತರ ಪತ್ರಿಕೋದ್ಯಮವನ್ನು ಆಯ್ಕೆಮಾಡಿಕೊಂಡು ಗೊಂದಲಕ್ಕೆ ಇಡಾಗಿದ್ದೆ ಆಗ ವಿಭಾದ ಪ್ರಾಧ್ಯಾಪಕಿ ಶೃತಿ ಮೇಡಂ ಅವರು ನಮ್ಮಲ್ಲಿ ಧೈರ್ಯವನ್ನು ತುಂಬಿ ಮುನುಗ್ಗುವಂತೆ ಮಾಡಿದ್ದರು. ನಿಜವಾದ ಪತ್ರಿಕೋದ್ಯಮವನ್ನು ನಾವು ಇಲ್ಲಿ ಕಾಣಲು ಸಾಧ್ಯವಾಯಿತು.

ಆಗಲೇ ನಾನು ನಿರ್ಧಾರ ಮಾಡಿದೆ ನಾನು ಒಬ್ಬ ದಿಟ್ಟ ಪತ್ರಕರ್ತೆಯಾಗಿ ಸಮಾಜವನ್ನು ತಿದ್ದುವ ಕೆಲಸಮಾಡಲು ಮುಂದಾಗುತ್ತೆನೆ. ಪತ್ರಿಕೆಗಳಲ್ಲಿ ನಾವು ಹಲವಾರು ಕೆಲಸಗಳನ್ನು ಸಹ ಮಾಡಬಹುದಾಗಿದೆ ಕುಳಿತ ಮಾಡುವ ಕೆಲಸಗಳು ಇರುತ್ತವೆ. ಹಾಗೇ ಓಡಾಡಿ ಮಾಡುವ ಕೆಲಸಗಳನ್ನು ನಾವು ಗುರುತಿಸಿಕೊಳ್ಳಬಹುದು.

ನಮಗೆ ಸರಕಾರಿ ನೌಕರಿ ಸಿಗದಿದ್ದರೂ ಪತ್ರಿಕೋದ್ಯಮದಲ್ಲಿ ಖಾಸಗಿ ಕೆಲಸವನ್ನು ಗಿಟ್ಟಿಸಿಕೊಲ್ಲಬಹುದು. ಒಟ್ಟಿನಲ್ಲಿ ಪತ್ರಿಕೋದ್ಯಮ ಎಂಬುವುದು ಒಂದು ಸಾಗರ ಅದರಲ್ಲಿ ನಾವಿಕನಂತೆ ನಾವು ಚಲಿಸಬೇಕು. ನಾವು ಪದವಿಯಲ್ಲಿ ಕಲಿಯುವುದಕ್ಕಿಂದ ವೃತ್ತಿ ಬದುಕಿನಲ್ಲಿ ಕಲಿಯಬೇಕಾದ ವಿಷಯಗಳು ಸಾಕಷ್ಟಿವೆ.

ಪತ್ರಿಕಾ ಕಛೇರಿಯಲ್ಲಿನ ತಂತ್ರಾಂಶ ಮತ್ತು ಯಂತ್ರಾಂಶಗಳ ಮಾಹಿತಿ ಹಾಘು ಪೋಟೋಶಾಪ್, ಇನ್ ಡಿಸೈನ್, ಕೋರಲ್ ಡ್ರಾ ಮಾಹಿತಿಗಳನ್ನು ತಿಳಿದುಕೊಂಡೆವು.

Cont...

Scanned with CamScanner

ಪತ್ರಿಕೆ ಎಂಬುದು ನಮ್ಮ ಕಣ್ಣಿಗೆ ನೋಡಲು ತುಂಬಾ ಸುಲಭ ಆದರೆ ಅದರ ಹಿಂದಿರುವ ಕೆಲಸದ ಒತ್ತಡ ತುಂಬಾ ದೊಡ್ಡದು ಹೀಗೆ ಒಂದೊಂದು ವಿಷಯದ ಬಗ್ಗೆ ಸಂಪೂರ್ಣ ಮಾಹಿತಿಯನ್ನು ತಿಳಿಯುತ್ತಾ ಪ್ರಾಯೋಗಿಕ ಅಧ್ಯಯನವನ್ನು ಮನಗಂಡೆವು. ಅದೇ ರೀತಿ ದಿನ ನಿತ್ಯ ಸುದ್ದಿ ಪತ್ರಿಕೆಗಳನ್ನು ವಿಶ್ಲೇಷಿಸುವ ಮನೋಭಾವಣೆಯನ್ನು ಬೆಳೆಸಿಕೊಳ್ಳಬೇಕು. ಒಬ್ಬ ವರದಿಗಾರನಾಗಲು ಬೇಕಾಗಿರುವುದು ಬರವಣಿಗೆ ಹಾಗೂ ಕೆಲಸ ಈ ಎರಡು ಗುಣಗಳನ್ನು ಹೊಂದಿದ್ದವರು ಪತ್ರಕರ್ತರಾಗಬಹುದು. ಆದರೆ ವಾಸ್ತವ ಪತ್ರಿಕೋದ್ಯಮವನ್ನು ನಾವು ಮನಗಂಡಾಗ ಸಾಕಷ್ಟು ಬದಲಾವಣೆಗಳನ್ನು ಕಾನಬಹುದು. ಹಾಗೆ ಮೊದಲಿನ ಪತ್ರಿಕೆಗಳು ಇಷ್ಟೊಂದು ಕಲರ್‌ಫುಲ್ಲಾಗಿ ಇರುತ್ತಿರಲಿಲ್ಲ ಬ್ಲ್ಯಾಕ್ & ವೈಟ್ ಗಳಲ್ಲಿ ಬರುತ್ತಿದ್ದವು ತಂತ್ರಜ್ಞಾನದ ಪ್ರಭಾವ ಇಂದು ಪತ್ರಿಕೋದ್ಯಮವನ್ನು ಈ ಹಂತದತ್ತ ತಂದು ನಿಲ್ಲಿಸಿದೆ. ನನಗೆ ಸಹಕರಿಸಿದ ಪತ್ರಿಕೋದ್ಯಮ ವಿಭಾಗದ ಪ್ರಾಧ್ಯಾಪಕರು ಹಾಗೂ ಪ್ರಾಚಾರ್ಯರಿಗೆ ನಾನು ಚಿರಋಣಿ.

ಪೂಜಾ ಬೇವನೂರ

ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ

ಬಿ.ಎ.ಮೂರನೇ ಸೆಮಿಸ್ಟರ್

Shruti Chingundi


Head of Department
Journalism & Mass Communication
S.B.Arts & K.C.P Science College,
Vijayapur

IQAC, Co-ordinat...
S.B.Arts & K.C.P.Science College,
Vijayapur.

Principal,
S.B. Arts and KCP Science Co...
VIJAYAPUR

Scanned with CamScanner

# ಸುದ್ದಿಗಳ ಒಗ್ಗರಣೆ ಲೋಕ



ಅಡಿಬರಹ:ಸ್ಥಾನಿಕ ಸಂಪಾದಕರು ಪುಟಗಳ ಸಮಗ್ರ ಮಾಹಿತಿ ನೀಡುತ್ತಿರುವುದು.

Cont...

Scanned with CamScanner

ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಇಂದು ಹೆಚ್ಚಿನ ಅವಕಾಶಗಳನ್ನು ಹೊತ್ತು ನಿಂತಿರುವುದು.

ಆದರೆ ನಮ್ಮ ಭಾಗದ ಜನರಿಗೆ ಈ ವಿಷಯದ ಬಗ್ಗೆ ಗೋತ್ತಿಲ್ಲ. ಆದರೆ ಇಂದು ವಿಜಯಪುರ ಜಿಲ್ಲೆಯ ಬಿಎಲ್‌ಡಿಇ ಸಂಸ್ಥೆ ಪತ್ರಿಕೋದ್ಯಮಕ್ಕಾಗಿ ಒಂದು ವಿಭಾಗವನ್ನು ತೆಗೆದು ವಿದ್ಯಾರ್ಥಿಗಳಿಗೂ ಪತ್ರಿಕೋದ್ಯಮದ ಸದಭಿರುಚಿಯನ್ನು ನೀಡುತ್ತಿದೆ.

ವರದಿಗಾರ ಮತ್ತು ಸಂಪಾದಕರು ಪತ್ರಿಕೆಯ ಎರಡು ಕಣ್ಣುಗಳಿದ್ದಂತೆ ಎಂಬ ಮಾತು ಸತ್ಯವಾದದ್ದು. ಅದರಲ್ಲಿ ಉಪಸಂಪಾದಕರ ಪಾತ್ರವು ತುಂಬಾ ಮಹತ್ವದ್ದು. ಅದರಲ್ಲಿ ಕೆಲವೊಂದು ಗೊಂದಲಗಳು ಇರುವುದುಂಟು. ವರದಿಗಾರ ಸುದ್ದಿ ತರದಿದ್ದರೆ ಉಪಸಂಪಾದಕ ಪುಟ ತಯಾರಿಸಲು ಸಾಧ್ಯವಿಲ್ಲ. ಅದೇ ರೀತಿ ಉಪಸಂಪಾದಕ ಪುಟ ತಯಾರಿಸದಿದ್ದರೆ ಪತ್ರಿಕೆ ಬರುವುದು ಕಷ್ಟ. ಈ ಎರಡು ಗೊಂದಲಗಳು ಮೊದಲಿನಿಂದಲು ಇರುವುದುಂಟು.

ನಮಗೆ ನಾಲ್ಕು ಗೋಡೆಗೆ ಸಿಮೀತವಾಗಿರುವ ಪತ್ರಿಕಾ ಲೋಕವನ್ನು ಪ್ರಾಯೋಗಿಕವಾಗಿ ತಿಳಿದುಕೊಳ್ಳುವ ಸಮಯ. ಎಲ್ಲರೂ ಸೈಲೆಂಟ್ ಆಗಿ ಕಛೇರಿಯ ಸಿಬ್ಬಂದಿ ಅವರು ಹೇಳುವ ಮಾತುಗಳನ್ನು ಗಮನಿಸುತ್ತಿದ್ದೆವು. ಪ್ರತಿ ಪುಟದ ಮಾಹಿತಿಯನ್ನು ಕ್ಷಣ-ಕ್ಷಣಕ್ಕೂ ನಮಗೆ ತೋರಿಸುತ್ತ ಮಾಹಿತಿಯನ್ನು ನೀಡುತ್ತಿದ್ದರು.

ಅಲ್ಲಿರುವ ಪ್ರತಿಯೊಬ್ಬರ ಕೆಲಸ ಅಚ್ಚು-ಕಟ್ಟು ಅದನ್ನು ನೋಡುತ್ತಿದ್ದರೆ ನಾವು ಯಾವಗ ಈ ವೃತ್ತಿಗೆ ಬರುತ್ತೆವೆ ಎಂದಿನಿಸುತ್ತಿತ್ತು. ಹಾಗೇ ಪತ್ರಿಕೆಗಳಲ್ಲಿ ಕೊಡುವಂತಹ ಕ್ರಿಯಾತ್ಮಕ ಶಿರ್ಷಿಕೆ

Cont..

Scanned with CamScanner

ಬರವಣಿಗೆಯ ಬಗ್ಗೆ ಮಾಹಿತಿ ನೀಡಿದರು. ಹಾಗೂ ವೃತ್ತಿ ಬದುಕಿಗೆ ಕಾಲಿಡುವ ಮುನ್ನ ನಾವು ಏನನ್ನು ಕಲಿಯ ಬೇಕೆಂಬ ಮಾರ್ಗವನ್ನು ತೋರಿಸಿ ಕೊಟ್ಟರು.

ಮಾಹಿತಿಗಳನ್ನು ಕಲೆ ಹಾಕುವುದು ಹೇಗೆ? ಸುದ್ದಿಯನ್ನು ಗ್ರಹಿಸುವ ಕ್ರಮ ಮತ್ತು ಸುದ್ದಿಯನ್ನು ರಸವತ್ತಾಗಿ ಬಿಂಬಿಸುವುದು ಓದಗರ ಮನ ಗೆಲ್ಲುವುದು, ಹೀಗೆ ನಾವು ಅಲ್ಲಿ ಅವರು ಮಾಡುತ್ತಿರುವ ಪ್ರತಿಯೊಂದು ಕೆಲಸಗಳು ಅಚ್ಚು ಕಟ್ಟು.

ಅಲ್ಲಿ ಡಿಸೈನಿಂಗ್ ಸಾಫ್ಟ್‌ವೇರ್, ಫೋಟೋ ಶಾಫ್, ಕೋರಲ್ ಡ್ರಾ ಇವು ಚಿತ್ರಗಳನ್ನು ಸರಿದೂಗಿಸಿಕೊಳ್ಳುವ ತಂತ್ರಾಂಶಗಳು ಇವುಗಳ ಹೆಸರನ್ನು ಕ್ಲಾಸ್ ನಲ್ಲಿ ಕೇಳಿದ್ದೆ ಅದನ್ನು ನೋಡಿದಾಗ ಇನ್ನೂ ಪರಿಪೂರ್ಣವಾದ ಮಾಹಿತಿ ಸಿಕ್ಕಂತಾಯಿತು.

ಒಂದು ಪತ್ರಿಕೆ ಎಂಟು ಕಾಲಂಗಳಲ್ಲಿ ಸಿದ್ಧಪಡಿಸುತ್ತಾರೆ. ಕಾಲಂಗಳನ್ನು ಸರಿಪಡಿಸಿ ಸುದ್ದಿಗೆ ತಕ್ಕಂತೆ ಸರಿಪಡಿಸಿಕೊಂಡು ಪೇಜ್ ಗಳನ್ನು ಮಾಡುತ್ತಾರೆ. ಪ್ರಮುಖ ವಿಷಯಗಳನ್ನು ಜನರಿಗೆ ಮುಟ್ಟಿಸಲು ಬಾಕ್ಸ್ ಕಾಲಂಗಳಲ್ಲಿ ನೀಡುತ್ತಾರೆ. ಕಲರ್ ಹಾಕಿ ಟಿಂಟ್ ಕುಡಾ ಕೊಡುತ್ತಾರೆ. ಹೀಗೆ ಪತ್ರಿಕೆಗಳಲ್ಲಿರುವ ಪ್ರಾಯೋಗಿಕ ಮಾಹಿತಿಗೆ ಸಹಕರಿಸಿದ ವಿಭಾದ ಪ್ರಾಧ್ಯಾಪಕರಿಗೂ ಪ್ರಾಚಾರ್ಯರಿಗೂ ಧನ್ಯವಾದಗಳು.

ಅನಸೂಯಾ ಕೊಣ್ಣೂರ

ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ

ಬಿ.ಎ.ಮೂರನೇ ಸೆಮಿಸ್ಟರ್

Shruti Chingundi

Head of Department
Journalism & Mass Communication
S.B.Arts & K.C.P Science College,
Vijayapur

IQAC, Co-ordinator
S.B.Arts & K.C.P.Science College,
Vijayapur.

Principal,
S.B. Arts and KCP Science College
VIJAYAPUR

Scanned with CamScanner

| Name of the students | Roll No | Regission NO | sign |
| --- | --- | --- | --- |
| Shubha. M. Hattalli | 151 | A1750967 | S.Hattalli |
| Pooja. S. Bevanoor | 155 | A1750886 | Bevanoor |
| Anasuya. Konnur | 65 | A1750808 | Anu |
| Anu | | | |

Shruti Chinguard

**Head of Department**
Journalism & Mass Communication
S.B.Arts & K.C.P Science College,
Vijayapur

**IQAC, Co-ordinator**
S.B.Arts & K.C.P.Science College,
Vijayapur.

Principal,
S.B. Arts and KCP Science College
VIJAYAPUR

Scanned with CamScanner